**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 3/2010**

**ದೋ.ಸಾ. : 17 ಪ್ರಾ.ಸಾ. : 9**

ಸಾಕ್ಷಿಯ ಹೆಸರು : ರಮೇಶ
ತಂದೆಯ ಹೆಸರು : ಮರಿಯಾ ನಾಯ್ಕ
ವಯಸ್ಸು : 60 ವರ್ಷ
ಉದ್ಯೋಗ : ಕೂಲಿ
ವಾಸ : ಕಾನಗೋಡು, ಸಿದ್ದಾಪುರ

**ದಿನಾಂಕಃ 16-09-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು ಕಾನಗೋಡು ಗ್ರಾಮದಲ್ಲಿ ಹುಟ್ಟಿದಾಗಿನಿಂದ ವಾಸ ಇದ್ದೇನೆ. 2001-02 ನೇ ಸಾಲಿನ ಸ್ವಚ್ಛ ಗ್ರಾಮ ಯೋಜನೆಯಡಿಯಲ್ಲಿ ಶೌಚಾಲಯ ನಿರ್ಮಿಸಿಕೊಳ್ಳಲು ಇದ್ದ ಯೋಜನೆಯಲ್ಲಿ ನಾನು ಫಲಾನುಭವಿ ಆಗಿದ್ದೇನು ಎಂದು ನನಗೆ ಗೊತ್ತಿಲ್ಲ . ನನ್ನ ಹೆಸರು ಫಲಾನುಭವಿ ಪಟ್ಟಿಯಲ್ಲಿ ಇತ್ತೋ ಎನ್ನುವುದು ನನಗೆ ಗೊತ್ತಿಲ್ಲ. ಅದಕ್ಕೆ ಸಂಬಂಧಿಸಿದಂತೆ ನನಗೆ ಕಾನಗೋಡು ಗ್ರಾಮ ಪಂಚಾಯತಿಯಿಂದ ರೂ. 3000/- ವನ್ನು ಕೊಟ್ಟಿರುವುದಿಲ್ಲ. ನಾನು ಪೊಲೀಸ್ ನವರು ವಿಚಾರಣೆ ಮಾಡಿದಾಗ ಇದೇ ವಿಚಾರ ಹೇಳಿದ್ದೇನೆ. ನನ್ನ ಗ್ರಾಮದಲ್ಲಿ ರಮೇಶ ತಂದೆ ಮರಿಯಾ ನಾಯ್ಕ ಎನ್ನುವ ಹೆಸರಿನವರು ಬೇರೆ ಯಾರೂ ಇರುವುದಿಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಜಿ ಟಿ ಎನ್ ರವರು ಗೈರು ಹಾಜರು ಇದ್ದಾರೆ. ಅವರ ಪರ ಎಸ್ ಜಿ ಎನ್ ವಕೀಲರು ಸಮಯ ಕೋರಿದ್ದಾರೆ . ಸಾಕ್ಷಿಗೆ ರೂ. 500/- ಭತ್ಯೆ ಪಾವತಿ ಮಾಡಲು ನಿರ್ದೇಶನ ನೀಡಲಾಗಿದೆ . ಭತ್ಯೆ ಪಾವತಿ ಮಾಡಿರುವುದಿಲ್ಲ. ಆದ್ದರಿಂದ ಸಮಯಾವಕಾಶ ಕೋರಿರುವುದನ್ನು ನಿರಾಕರಿಸಲಾಗಿದೆ . ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಗಿದೆ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ